

ಅದು ಹೆಣ್ಣಿಗೆ ಮಾತ್ರ ಎನ್ನುವಾಗ, ಅವಳಿಗೆ, ಆ ಮೌಲ್ಯವನ್ನೂ ಆ ಮೌಲ್ಯದ ಸಂಸ್ಥೀಕರಣವಾಗುವ 'ಕೈಭಾಷೆ'ಯನ್ನೂ ಒಪ್ಪಬಾರದು ಎನ್ನಿಸುತ್ತದೆ. ಇದರ ಸಲುವಾಗಿ ಅವಳು ತನ್ನ ಮದುವೆಯನ್ನು ಮುರಿದುಕೊಳ್ಳಲು ಆತ ಕೊಟ್ಟ ತೆರವನ್ನು ಹಿಂತಿರುಗಿಸಲು ಸಿದ್ಧಳಿದ್ದಾಳೆ. ಇಲ್ಲಿ ಸಂಕಮ್ಮ ಆಡುವ 'ಭಾಷೆ' ಗಂಡು ಭಾಷೆಯ ಎದುರಿಗೆ 'ಹೆಣ್ಣು ಭಾಷೆ'ಯನ್ನು ಕಟ್ಟಿಕೊಳ್ಳುವ ಅಸಾಧಾರಣ ಪ್ರಯತ್ನವಾಗಿ ಕಾಣುತ್ತದೆ. ಇಲ್ಲಿ ನಮ್ಮ ಅನುಭವಕ್ಕೆ ಬರುವ ಪರಮ ಸತ್ಯವೆಂದರೆ, ಹೆಣ್ಣು ತನ್ನ ಭಾಷೆಯನ್ನು ಕಟ್ಟಿಕೊಳ್ಳುವುದು ಎಂದರೆ, ತನ್ನನ್ನೂ ಹೊಸದಾಗಿ ರಚಿಸಿಕೊಳ್ಳುವುದು ಎನ್ನುವುದು. ಆದ್ದರಿಂದಲೇ ಹೆಣ್ಣು ತನ್ನದೇ ಭಾಷೆಯನ್ನು ಕಟ್ಟಿಕೊಳ್ಳುವ ಪ್ರಯತ್ನಗಳು ಕೇವಲ ಸಂವಹನಕ್ಕಾಗಿ 'ಹೆಣ್ಣು ಅರ್ಥಗಳನ್ನು ಸೃಷ್ಟಿಸಿಕೊಳ್ಳುವುದು' ಎನ್ನುವ ಸೀಮಿತ ಭಾಷಾಶಾಸ್ತ್ರದ ನೆಲೆಯ ವ್ಯಾಖ್ಯಾನವಾಗಲು ಸಾಧ್ಯವೇ ಇಲ್ಲ. ಇದೊಂದು ಸಾಂಸ್ಕೃತಿಕ, ಸಾಮಾಜಿಕ ಮತ್ತು ರಾಜಕೀಯ ಹೋರಾಟ ಮತ್ತು ಪ್ರಕ್ರಿಯೆ.

'ಮಿ ಟೂ' ಹೋರಾಟವನ್ನು ನಾನು ಹೆಣ್ಣು ಭಾಷೆಯ ಮುಖ್ಯ ಭಾಷಿಕ ಘಟ್ಟವೆಂದೇ ಕರೆಯುತ್ತೇನೆ. ಇದು ಹೆಣ್ಣು ಸೃಷ್ಟಿಸಿರುವ ಭಾಷೆ, ಪದಪರಿಕಲ್ಪನೆ ಮಾತ್ರವಲ್ಲ, ತನಗೆ ತಾನೇ ಸೃಷ್ಟಿಸಿಕೊಂಡಿರುವ ಸ್ಪೇಸ್, ಆವರಣ, ಅವಕಾಶವೂ ಹೌದು. ಇದೊಂದು 'ಅರಿವಿನ ಭಾಷೆ'ಯ ಸೃಷ್ಟಿ ಎಂದೇ ನಾವಿದನ್ನು ನೋಡಬೇಕು. 'ನಾನೂ ಕೂಡ' ಎನ್ನುವಾಗ ಇದು ಹೆಣ್ಣಿನ ಸಾಂಘಿಕ ಹೋರಾಟವಾಗಿದೆ. ಈ ಸಾಂಘಿಕ ಹೋರಾಟಕ್ಕೆ ಅದು ಹೊಸ ಭಾಷೆಯನ್ನು, ಇಲ್ಲಿ ಹೊಸದು ಎನ್ನುವಾಗ, ಇದೇ ಈಗ ಹುಟ್ಟಿದ ಎನ್ನುವ ಅರ್ಥದಲ್ಲಲ್ಲ, ತನ್ನೊಳಗೆ ಎಂದಿನಿಂದಲೂ ಇದ್ದ, ಸಣ್ಣ ಪ್ರಮಾಣದಲ್ಲಿಯೇ ಆದರೂ ಪ್ರಯೋಗಿಸುತ್ತಲೇ ಇದ್ದ ಭಾಷೆಯನ್ನು ಈಗ ಸಂಘಟಿಸುತ್ತಾ ಇರುವ ಭಾಷೆ ಎನ್ನುವ ಅರ್ಥದಲ್ಲಿ ಇದು ಅರಿವಿನ ಭಾಷೆ ಎಂದೆ. ಅದು ಹೆಣ್ಣಿಗೂ ಹೌದು, ಗಂಡಿಗೂ ಹೌದು. ಹೆಣ್ಣನ್ನು ದೇಹಭಾಷೆಯಲ್ಲಿಯೇ ಆಳುತ್ತಿದ್ದ ಗಂಡುಕುಲಕ್ಕೆ, ಇನ್ನಾದರೂ ಅದನ್ನು ಬದಲಿಸಿಕೊಳ್ಳಬೇಕು ಎನ್ನುವ ಅರಿವನ್ನು ಮೂಡಿಸುವ ಆಶಯ ಮತ್ತು ಉದ್ದೇಶದ್ದಾದರೆ, ಹೆಣ್ಣಿಗೆ ಈಗ – ನಾನು, ನೀನು, ಅವಳು, ಇವಳು, ಎಲ್ಲರೂ ಸೇರಿ, 'ನಾನೂ ಕೂಡ' ಎಂದು ನಮ್ಮ ಮೇಲಿನ ಆಕ್ರಮಣವನ್ನು ಎದುರಿಸಬೇಕಾದ ಅರಿವನ್ನು ತಂದುಕೊಂಡುವ ಭಾಷೆ.

ಸಂಕಮ್ಮನ ಉದಾಹರಣೆಯನ್ನು ಇನ್ನಷ್ಟು ಮುಂದುವರೆಸಬೇಕು. ನೀಲಯ್ಯ ಹೊರಟುಹೋದ ಮೇಲೆ ಮಾದಯ್ಯ ಬರುತ್ತಾನೆ. ಅಚ್ಚರಿ ಹುಟ್ಟಿಸುವಂತೆ ಸಂಕಮ್ಮ ಮಾದಯ್ಯನನ್ನು 'ಮಕ್ಕಳ ಫಲ'ಕ್ಕಾಗಿ ಒತ್ತಾಯಿಸುತ್ತಾಳೆ. ನೀಲಯ್ಯನ ಆತಂಕಕ್ಕೆ ವಿರುದ್ಧವಾಗಿ ಇಲ್ಲಿ ಸಂಕಮ್ಮನೇ ಮಾದಯ್ಯನನ್ನು ಕೂಡಲು ಒತ್ತಾಯಿಸುವ ಪ್ರಸಂಗವನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು?

ಮಕ್ಕಳ ಫಲವನ್ನು ನೀವು ಕೊಟ್ರೆ ಸರಿ
ಇಲ್ಲದೆ ಹೋದ ಪಕ್ಷದಲ್ಲಿ
ನಿಮ್ಮ ಪಾದದ ಮ್ಯಾಲೆ ಬಿದ್ದು
ಪ್ರಾಣನಾದರೆ ಬುಡುತೀನಿ

ಹೆಣ್ಣು ಮಾತನಾಡಬಾರದು ಎಂದು ನಿರೀಕ್ಷಿಸುವ ನೆಲೆಯನ್ನು ಬುಡಮೇಲು ಮಾಡುವ ಭಾಷೆಯಲ್ಲಿ ಇಲ್ಲಿ ಸಂಕಮ್ಮ ಮಾತನಾಡುತ್ತಿದ್ದಾಳೆ. ಆದರೆ, ನಿಜಕ್ಕೂ ಇಲ್ಲಿ ಸಂಕಮ್ಮ ಮಾತನಾಡುತ್ತಿರುವುದು ಯಾವ ಭಾಷೆ? ಅದು ಹೆಣ್ಣು ತನ್ನ ದೇಹದ ಮೇಲಿನ, ಹೆಣ್ಣಿಗೇ ವಿಶಿಷ್ಟವಾದ ತಾಯ್ತನದ ಮೇಲಿನ ತನ್ನ ಹಕ್ಕು ಮತ್ತು ಆಯ್ಕೆಯ ಭಾಷೆಯಲ್ಲಿ ಸಂಕಮ್ಮ ಮಾತನಾಡುತ್ತಿದ್ದಾಳೆ. ಇನ್ನೂ ಗಂಭೀರವಾಗಿ, ಆಳವಾಗಿ ನೋಡಿದರೆ, ಯಾವ ದೇಹ ಪಾವಿತ್ರ್ಯದ ಭಾಷೆಯನ್ನು ಅವಳಿಂದ ಅಪೇಕ್ಷಿಸಲಾಗುತ್ತಿದೆಯೋ ಅದರ ವಿರುದ್ಧ ಎದ್ದ 'ಬಂಡಾಯದ ಭಾಷೆ'ಯಾಗಿಯೂ ಇದನ್ನು ನೋಡಬಹುದು. ಸ್ತ್ರೀವಾದಿ ಪರಿಭಾಷೆಯಲ್ಲಿ ಇದು 'ಸ್ವಾಯತ್ತ ಭಾಷೆಯ' ಉಚ್ಚಾರವಾಗಿಯೂ ಕಾಣಿಸುತ್ತದೆ. ನೀವು ಹೆಣ್ಣನ್ನು, ಪ್ರಕೃತಿಯನ್ನು ಅಕಾರಣವಾಗಿ ನಿಯಂತ್ರಿಸಲು, ದಬ್ಬಾಳಿಕೆ ಮಾಡಲು ಪ್ರಯತ್ನಿಸಿದರೆ, ಅವಳು ಇಂಥದೊಂದು ಬಂಡಾಯದ ಭಾಷೆಯನ್ನು ಸೃಜಿಸುವುದು ಅನಿವಾರ್ಯ. ಇದನ್ನು ಗಂಡು ಭಾಷೆಯು ಸಂಕಮ್ಮ ದಾಂಪತ್ಯಧರ್ಮಕ್ಕೆ ಬಗೆಯುತ್ತಿರುವ ದ್ರೋಹವೆಂದೇ ಅರ್ಥ ಮಾಡಿಕೊಳ್ಳುತ್ತದೆ. ಆದರೆ, ಗಂಡು ಭಾಷೆಗೆ, ಹೆಣ್ಣನ್ನು ತಾನು ಅನುಮಾನದಿಂದ ನೋಡುವ, ಅದಕ್ಕಾಗಿ ಭಾಷೆ ನೀಡಲು ಒತ್ತಾಯಿಸುವ, ತಾನು ಮಾತ್ರ ಅಂಥ ಮೌಲ್ಯ ಮತ್ತು ಕರಾರುಗಳಿಂದ ಹೊರಗೇ

